ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು-1**

ಸಂಖ್ಯೆ ತ(1) ತ.ಪ.ಮಾ/ಕ.ತ.ಹ/9/2020-21 ದಿನಾಂಕ 16.04.2021

:ಜ್ಞಾಪನಾ: **ಅತಿ ಪ್ರಾಮುಖ್ಯತೆ**

ವಿಷಯ: 2018-19 ಮತ್ತು 2019-20 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಛೇರಿ/ಶಾಲೆಗಳ ವಾರ್ಷಿಕ ತಪಾಸಣೆಯನ್ನು ನಡೆಸಿರುವ ಹಾಗೂ ತಪಾಸಣೆಯ ವರದಿಗಳನ್ನು ಸಲ್ಲಿಸಿರುವ ಬಗ್ಗೆ,

ಉಲ್ಲೇಖ: 1) ಈ ಕಛೇರಿ ಪತ್ರದ ಸಂಖ್ಯೆ: ತ.ಪ.ಮಾ.ಕ.ತ.ಹ 73/2019-20 ದಿನಾಂಕ: 06.06.2019,

2) ಈ ಕಛೇರಿಯ ಪತ್ರದ ಸಂಖ್ಯೆ ತ(1) ತ.ಪ.ಮಾ/ಕ.ತ.ಹ/9/2020-21 ದಿನಾಂಕ 22.09.2020

*******

2018-19 ಮತ್ತು 2019-20 ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಛೇರಿ /ಶಾಲೆಗಳ ವಾರ್ಷಿಕ ತಪಾಸಣೆಗೆ ಕಛೇರಿಗಳನ್ನು ಹಂಚಿಕೆ ಮಾಡಿ ತಪಾಸಣೆ ಕೈಗೊಳ್ಳಲು ಉಲ್ಲೇಖಿತ ಮಾನ್ಯ ಆಯುಕ್ತರ ಪತ್ರದಲ್ಲಿ ತಿಳಿಸಲಾಗಿತ್ತು,

2018-19 ನೇ ಸಾಲಿನ ಕೆಲವು ಕಛೇರಿಗಳ ತಪಾಸಣೆ ಕೈಗೊಂಡಿರುವ ವರದಿಗಳು ಬಂದಿರುತ್ತವೆ, ಆದರೆ 2019-20 ನೇ ಅವಧಿಯ ತಪಾಸಣೆಗಳ ವರದಿಗಳು ಬಹುತೇಕ ಕಛೇರಿಗಳಿಂದ ಈ ಕಛೇರಿಗೆ ಇದುವರೆವಿಗೂ ಬಂದಿರುವುದಿಲ್ಲ. ಈ ಬಗ್ಗೆ, ಮಾನ್ಯ ಆಯುಕ್ತರು ಪ್ರಗತಿ ಪರಿಶೀಲನಾ ಸಭೆಯಲ್ಲಿ ತಪಾಸಣೆಯ ಗುರಿ ಸಾಧನೆಯ ಬಗ್ಗೆ, ಅಸಮಾಧಾನ ವ್ಯಕ್ತಪಡಿಸಿರುವುದರಿಂದ, ಹಾಗೂ ಮಾನ್ಯ ಆಯುಕ್ತರಿಗೆ ವರದಿಗಳನ್ನು ತತಕ್ಷಣ ಮಂಡಿಸಬೇಕಾಗಿರುವುದರಿಂದ ಇದುವರೆವಿಗೂ ತಪಾಸಣೆ ಕೈಗೊಂಡಿರುವ ವರದಿಗಳನ್ನು ಈ ಕಛೇರಿ ತುರ್ತಾಗಿ ಸಲ್ಲಿಸಲು ತಿಳಿಸಿದೆ.

2018-19 ಮತ್ತು 2019-20 ನೇ ಅವಧಿಯ ತಪಾಸಣೆಯನ್ನು ಕೈಗೊಂಡ ಕಛೇರಿಗಳ ಹೆಸರು ಮತ್ತು ವರದಿ ಸಲ್ಲಿಸಿರುವ ಹಾಗೂ ತಪಾಸಣೆಯನ್ನು ಮಾಡದ ಕಛೇರಿಗಳ ಮಾಹಿತಿಯನ್ನು ಅತಿ ಜರೂರಾಗಿ ಈ ಕೆಳಕಂಡ ನಮೂನೆಯಲ್ಲಿ, ನೀಡಲು ತಿಳಿಸಿದೆ, ತಪ್ಪಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ಹೆಸರನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಬಯಸಲಾಗುವುದು,

| ಕ್ರಸಂ | ವರ್ಷವಾರು | ತಮ್ಮ ಕಛೇರಿಗೆ ತಪಾಸಣೆಗೆ ಹಂಚಿಕೆ ಮಾಡಲಾದ ಕಛೇರಿಗಳು | ತಪಾಸಣೆ ಮಾಡಿದ ದಿನಾಂಕ | ತಪಾಸಣೆ ಮಾಡಿದ ನಂತರ ವರದಿಗಳನ್ನು ಸಲ್ಲಿಸರುವ ಕಛೇರಿಗಳ ಹೆಸರು ಹಾಗೂ ವರದಿ ಸಲ್ಲಿಸಿದ ದಿನಾಂಕ | ತಪಾಸಣೆ ನಡೆಸಿ ವರದಿಯನ್ನು ಇದುವರೆವಿಗೂ ಸಲ್ಲಿಸದೆ ಇರುವ ಕಛೇರಿಗಳ ಹೆಸರು ಮತ್ತು ಕಾರಣ | ತಪಾಸಣೆಯನ್ನು ಇದುವರೆವಿಗೂ ಕೈಗೊಳ್ಳದಿರುವ ಕಛೇರಿಗಳ ಹೆಸರು ಮತ್ತು ಕಾರಣ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

(2018-19 ಮತ್ತು 2019-20 ನೇ ಸಾಲಿನ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡಲು ತಿಳಿಸಿದೆ)

16/04/21

ಸಹ ನಿರ್ದೇಶಕರು ( ಶಾಲಾ ಶಿಕ್ಷಣ)

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಉಪ ನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಶಿಕ್ಷಕರ ಸದನ ಕೆ.ಜಿ.ರೋಡ್, ಬೆಂಗಳೂರು,
2) ಉಪ ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.

3) ಉಪ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.
4) ಉಪ ನಿರ್ದೇಶಕರು, ಸಂಸ್ಕೃತ ಶಾಖೆ ಮೈನಾರಿಟಿ ವಿಭಾಗ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು
5) ಉಪ ನಿರ್ದೇಶಕರು (ಯೋಜನೆ), ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6) ಉಪ ನಿರ್ದೇಶಕರು , (ಶಿಕ್ಷಕರ ಶಿಕ್ಷಣ) ಡಿ.ಎಸ್.ಇ.ಆರ್.ಟಿ. ಬೆಂಗಳೂರು.
7) ಉಪ ನಿರ್ದೇಶಕರು ,(ಇ.ಟಿ.ಸಿ) ಡಿ.ಎಸ್.ಇ.ಆರ್.ಟಿ. ಬೆಂಗಳೂರು.
8) ಉಪ ನಿರ್ದೇಶಕರು, (ಕೆ.ಎಸ್.ಕ್ಯೂ.ಎ.ಎ.ಸಿ) ಕ.ಪ್ರೌ.ಶಿ.ಪ.ಮಂ.ಮಲ್ಲೇಶ್ವರಂ ಬೆಂಗಳೂರು.
9) ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು ಆಯುಕ್ತರ ಕಛೇರಿ ಬೆಂಗಳೂರು
10) ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ (ಆಡಳಿತ) ಇವರ ಅಗತ್ಯ ಕ್ರಮಕ್ಕಾಗಿ,
11) ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಡಯಟ್ ಪ್ರಾಂಶುಪಾಲರ ಅಗತ್ಯ ಕ್ರಮಕ್ಕಾಗಿ,
12) ಕಛೇರಿ ಪ್ರತಿ,

ದೃಢೀಕರಿಸಿದೆ.

16/04/21